**ಓ.ಎಸ್. ನಂಃ 386/2023**

**ಡಿ.ಡಬ್ಲ್ಯೂಃ 1**

**ದಿನಾಂಕ 10.06.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿಯ ಪರ ಃ ಶ್ರೀ ಎಲ್.ವಿ.ಆರ್. ವಕೀಲರಿಂದಃ</u>**

1. ವಾದಿಯ ಗಂಡನ ಹೆಸರು ಶಿವಣ್ಣ ಅಂತ ಇರುತ್ತದೆ. ವಾದಿಯ ತಂದೆಯ ಹೆಸರು ಕರೀಗೌಡ @ ಕಾರಿಗೌಡ ಅಂತ ಇರುತ್ತದೆ. ವಾದಿಯ ತಂದೆಯಾದ ಕರೀಗೌಡ @ ಕಾರಿಗೌಡ ಇವರಿಗೆ ಅಣ್ಣಯ್ಯ ಎನ್ನುವ ಒಬ್ಬನೇ ತಮ್ಮನಿದ್ದು, ಬೇರೆ ಯಾರು ಸಹ ಸಹೋದರ ಸಹೋದರಿಯರು ಇರಲಿಲ್ಲ. ವಾದಿಯ ತಂದೆಯಾದ ಕರೀಗೌಡ @ ಕಾರಿಗೌಡ ಮತ್ತು ಅವರ ತಮ್ಮ ಅಣ್ಣಯ್ಯ ಇವರು ನಾನು ಜನಿಸುವ ಪೂರ್ವದಲ್ಲಿಯೇ ಆಸ್ತಿಗಳನ್ನೆಲ್ಲಾ ಪಾಲು ವಿಭಜನೆ ಮಾಡಿಕೊಂಡಿರುತ್ತಾರೆ. ಕರೀಗೌಡ @ ಕಾರಿಗೌಡ ಮತ್ತು ಅವರ ತಮ್ಮ ಅಣ್ಣಯ್ಯ ಇವರು ಸುಮಾರು 50-60 ವರ್ಷಗಳ ಹಿಂದೆ ಆಸ್ತಿಗಳನ್ನೆಲ್ಲಾ ಪಾಲು ವಿಭಜನೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ.

2. ದಾವಾ ಆಸ್ತಿಯು ವಾದಿಯ ತಂದೆಯಾದ ಕರೀಗೌಡ @ ಕಾರಿಗೌಡರಿಗೆ ದಿನಾಂಕ 24.10.1975 ರಂದು ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಆಸ್ತಿಯಾಗಿರುತ್ತದೆ ಎಂದರೆ ಸರಿ. ವಾದಿಯ ತಂದೆಯಾದ ಕರೀಗೌಡ @ ಕಾರಿಗೌಡರು 2014 ರಲ್ಲಿ ಮರಣ ಹೊಂದಿರುತ್ತಾರೆ. ವಾದಿಯ ತಾಯಿಯ ಹೆಸರು ಹೊನ್ನಮ್ಮ @ ಕಳಸಮ್ಮ ಅಂತ ಇರುತ್ತದೆ ಎಂದರೆ ಸರಿ. ಕರೀಗೌಡ @ ಕಾರಿಗೌಡ ಮತ್ತು ಹೊನ್ನಮ್ಮ @ ಕಳಸಮ್ಮ ದಂಪತಿಗಳಿಗೆ ವಾದಿಯನ್ನು ಹೊರತುಪಡಿಸಿ ಬೇರೆ ಮಕ್ಕಳಿಲ್ಲ ಎಂದರೆ ಸರಿ. ರು ಮರಣ ಹೊಂದಿದ ನಂತರ ದಾವಾ ಆಸ್ತಿಯು ಅವರ ಏಕೈಕ ಮಗಳಾದ ವಾದಿಗೆ ಹೋಗಿರುತ್ತದೆ ಎಂದರೆ ಸಾಕ್ಷಿಯು ವಾದಿಯ ತಂದೆಯಾದ ಕರೀಗೌಡ @ ಕಾರಿಗೌಡರನ್ನು ನಾನೇ ನೋಡಿಕೊಂಡ ಕಾರಣ ದಾವಾ ಆಸ್ತಿಯನ್ನು ಕರೀಗೌಡ @ ಕಾರಿಗೌಡರು ನನಗೆ ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ.

3. ಕರೀಗೌಡ @ ಕಾರಿಗೌಡರ ಮರಣದವರೆಗೂ ವಾದಿಯೇ ಅವರ ಲಾಲನೆ-ಪೋಷನೆ ಮಾಡಿ ನೋಡಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕರೀಗೌಡ @ ಕಾರಿಗೌಡರನ್ನು ನಾನೇ ನೋಡಿಕೊಂಡಿರುತ್ತೇನೆ ಎಂದು ಸ್ವತಃ ನುಡಿದಿರುತ್ತಾರೆ. ಸೂಕ್ತ ದಾಖಲೆಗಳನ್ನು ಹಾಜರುಪಡಿಸಿ ತಮ್ಮ ಹೆಸರಿಗೆ ದಾವಾ ಆಸ್ತಿಯ ಖಾತೆ ವರ್ಗಾವಣೆ ಮಾಡಿಸಿಕೊಳ್ಳುವಂತೆ ಮಾನ್ಯ ಉಪವಿಭಾಗಾಧಿಕಾರಿಯವರು ನಿಪಿ.17 ರ ಆದೇಶವನ್ನು ಹೊರಡಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯನ್ನು ಪುಸಲಾಯಿಸಿ ನಾನು ನಿಡಿ.6 ರಿಂದ ನಿಡಿ.27 ರ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯ ವಿಸ್ತೀರ್ಣ ಮತ್ತು ಚೆಕ್ಕುಬಂಧಿ ಸರಿ ಇರುತ್ತದೆ ಎಂದರೆ ಸರಿ. ದಿನಾಂಕ 16.05.2002 ರ ಮೂಲ ವೀಲುನಾಮೆಯು ಕರೀಗೌಡ @ ಕಾರಿಗೌಡರ ಪೆಟ್ಟಿಗೆಯಲ್ಲಿತ್ತು. ಕರೀಗೌಡ @ ಕಾರಿಗೌಡರ ಮರಣದ ನಂತರ ದಿನಾಂಕ 16.05.2002 ರ ಮೂಲ ವೀಲುನಾಮೆಯು ನನಗೆ 2014 ರಲ್ಲಿಯೇ ಸಿಕ್ಕಿರುತ್ತದೆ. ದಿನಾಂಕ 16.05.2002 ರ ಮೂಲ ವೀಲುನಾಮೆಯು ನನಗೆ 2014 ರಲ್ಲಿ ಸಿಕ್ಕಿದ ನಂತರ ಸದರಿ ವೀಲುನಾಮೆ ಆಧಾರದ ಮೇಲೆ ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡಲು ನಾನು ಯಾವುದೇ ಸಕ್ಷಮ ಪ್ರಾಧಿಕಾರದ ಅರ್ಜಿಯನ್ನು ಸಲ್ಲಿಸಿರಲಿಲ್ಲ. ದಿನಾಂಕ 16.05.2002 ರ ವೀಲುನಾಮೆಯ ಪ್ರಕಾರ ನಾನೇ ದಾವಾ ಆಸ್ತಿಯ ಮಾಲೀಕ ಎಂದು ಘೋಷಿಸುವಂತೆ ಕೋರಿ ಇಲ್ಲಿಯವರೆಗೂ ಯಾವುದೇ ನ್ಯಾಯಾಲಯದ ಮುಂದೆ ದಾವೆಯನ್ನು ಹೂಡಿರುವುದಿಲ್ಲ.

5. ದಿನಾಂಕ 16.05.2002 ರ ವೀಲುನಾಮೆಯಡಿಯಲ್ಲಿ ನನಗೆ ಈ ದಾವೆಯ ಆಸ್ತಿ ಮತ್ತು ಸರ್ವೆ ನಂಬರ್ 246/2 ರ 5 ಗುಂಟೆ ಜಮೀನನ್ನು ಕರೀಗೌಡ @ ಕಾರಿಗೌಡರು ಬರೆದುಕೊಟ್ಟಿರುತ್ತಾರೆ. 2002 ರಿಂದಲೂ ಸಹ ಸರ್ವೆ ನಂಬರ್ 246/2 ರ ಆಸ್ತಿಯ ಪಹಣಿಯಲ್ಲಿ ಕೆ ಆರ್ ಎಸ್ ಮುಳುಗಡೆ ಎಂದು ನಮೂದಾಗಿತ್ತು ಎಂದರೆ ಸಾಕ್ಷಿಯು ಸರ್ವೆ ನಂಬರ್ 246/2 ರ ಆಸ್ತಿಯು ಕೆ ಆರ್ ಎಸ್ ಮುಳುಗಡೆ ಆಗಿರುವ ಬಗ್ಗೆ ನನಗೆ ಇತ್ತೀಚೆಗೆ ಗೊತ್ತಾಗಿರುತ್ತದೆ ಎಂದು ನುಡಿದಿರುತ್ತಾರೆ.

6. ದಾವಾ ಆಸ್ತಿಯು ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ದಿನದಿಂದ ತಮ್ಮ ಮರಣದವರೆಗೂ ವಾದಿಯ ತಂದೆಯಾದ ಕರೀಗೌಡ @ ಕಾರಿಗೌಡರೇ ದಾವಾ ಆಸ್ತಿಯನ್ನು ಉಳುತ್ತಿದ್ದರು ಎಂದರೆ ಸರಿ. ಕರೀಗೌಡ @ ಕಾರಿಗೌಡರ ಮರಣದ ನಂತರ

ಇಲ್ಲಿಯವರೆಗೂ ವಾದಿಯೇ ದಾವಾ ಆಸ್ತಿಯನ್ನು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯನ್ನು ಕರೀಗೌಡ @ ಕಾರಿಗೌಡರ ಮರಣದ ನಂತರ ನಾನೇ ಉಳುಮೆ ಮಾಡುತ್ತಿದ್ದೇನೆ ಎಂದು ಸ್ವತಃ ನುಡಿದಿರುತ್ತಾರೆ.

7. ದಿನಾಂಕ 16.05.2002 ರ ವೀಲುನಾಮೆಯಲ್ಲಿ ಈ ದಾವೆಯ ಆಸ್ತಿ ಮತ್ತು ಸರ್ವೇ ನಂಬರ್ 246/2 ರ 5 ಗುಂಟೆ ಜಮೀನಿಗೆ ಒಂದೇ ಚೆಕ್ಕುಬಂಧಿಯನ್ನು ನಮೂದಿಸಿರುತ್ತಾರೆ. ಈ ದಾವೆಯ ಅನುಸೂಚಿಯಲ್ಲಿ ನಮೂದಿಸಿರುವ ದಾವೆಯ ಆಸ್ತಿಯ ಚೆಕ್ಕುಬಂಧಿ ಮತ್ತು ದಿನಾಂಕ 16.05.2002 ರ ವೀಲುನಾಮೆಯಲ್ಲಿ ನಮೂದಿಸಿರುವ ಚೆಕ್ಕುಬಂಧಿ ಬೇರೆ ಬೇರೆ ಚೆಕ್ಕುಬಂಧಿಗಳಾಗಿರುತ್ತವೆ ಎಂದರೆ ಸರಿಯಲ್ಲ.

8. ದಿನಾಂಕ 16.05.2002 ರ ವೀಲುನಾಮೆಯನ್ನು ಬರೆಯಲು ಕರೀಗೌಡ @ ಕಾರಿಗೌಡರನ್ನು ಯಾರು ಉಪನೊಂದಣಾಧಿಕಾರಿ ರವರ ಕಚೇರಿಗೆ ಕರೆದುಕೊಂಡು ಹೋಗಿದ್ದರು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲವೆಂದು ಹಾಗೂ ದಿನಾಂಕ 16.05.2002 ರ ವೀಲುನಾಮೆ ತನಗೆ ಕರೀಗೌಡ @ ಕಾರಿಗೌಡರ ಮರಣ ಸಿಕ್ಕಿರುತ್ತದೆ ಎಂದು ನುಡಿದಿರುತ್ತಾರೆ. ದಿನಾಂಕ 16.05.2002 ರಲ್ಲಿ ಕರೀಗೌಡ @ ಕಾರಿಗೌಡರು ವಾದಿಯೊಂದಿಗೆ ವಾಸವಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಿನಾಂಕ 16.05.2002 ರಲ್ಲಿ ಕರೀಗೌಡ @ ಕಾರಿಗೌಡರು ನನ್ನೊಂದಿಗೆ ವಾಸವಿದ್ದರು ಎಂದು ಸ್ವತಃ ನುಡಿದಿರುತ್ತಾರೆ.

9. ನನ್ನ ಮತ್ತು ವಾದಿಯ ತಾತನ ಹೆಸರು ಕೆಂಪೇಗೌಡ ಎಂದರೆ ಸಾಕ್ಷಿಯು ನಮ್ಮ ತಾತನನ್ನು ಕೆಂಪೇಗೌಡ @ ಮಾಯಿಗೌಡ ಎನ್ನುವ ಎರಡು ಹೆಸರಿನಿಂದ ಕರೆಯುತ್ತಿದ್ದರು ಎಂದು ಸ್ವತಃ ನುಡಿದಿರುತ್ತಾರೆ. ನಮ್ಮ ತಾತನನ್ನು ಕೆಂಪೇಗೌಡ @ ಮಾಯಿಗೌಡ ಎನ್ನುವ ಎರಡು ಹೆಸರಿನಿಂದ ಕರೆಯುತ್ತಿದ್ದರು ಎಂದು ತೋರಿಸಲು ನಾನು ಅವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

10. ಕರೀಗೌಡ @ ಕಾರಿಗೌಡರ ಮರಣದ ನಂತರ ದಾವಾ ಆಸ್ತಿಯು ವಾದಿಯ ಹೆಸರಿಗೆ ಪೌತಿ ಖಾತೆಯಾಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಮೋಸದಿಂದ ವಾದಿಯು ತಮ್ಮ ಹೆಸರಿಗೆ ದಾವಾ ಆಸ್ತಿಯ ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿಯು

ನುಡಿದಿರುತ್ತಾರೆ. ಸುಳ್ಳು ದಾಖಲೆಗಳ ಆಧಾರದ ಮೇಲೆ ವಾದಿಯು ಮೋಸದಿಂದ ತಮ್ಮ ಹೆಸರಿಗೆ ದಾವಾ ಆಸ್ತಿಯ ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದು ನಾನು ವಾದಿಯ ವಿರುದ್ಧ ಪೋಲಿಸ್ ಠಾಣೆಯಲ್ಲಿ ಯಾವುದೇ ದೂರನ್ನು ನೀಡಿರುವುದಿಲ್ಲ. ದಿನಾಂಕ 16.05.2002 ರ ವೀಲುನಾಮೆಯಡಿಯಲ್ಲಿ ನನಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಪ್ರಾಪ್ತವಾಗಿರದ ಕಾರಣ ಇಲ್ಲಿಯವರೆಗೂ ನಾನು ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡಲು ಪ್ರಯತ್ನಿಸಿರುವುದಿಲ್ಲ ಎಂದರೆ ಸರಿಯಲ್ಲ.

11. ನಾನು ಕರೀಗೌಡ @ ಕಾರಿಗೌಡರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 2002 ರಿಂದ ಕರೀಗೌಡ @ ಕಾರಿಗೌಡರ ಆರೋಗ್ಯ ಸರಿ ಇರಲ್ಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತಮ್ಮ ಮರಣದವರೆಗೂ ಕರೀಗೌಡ @ ಕಾರಿಗೌಡರ ಸಂಪೂರ್ಣವಾಗಿ ಆರೋಗ್ಯವಂತರಾಗಿದ್ದರು ಎಂದು ಸ್ವತಃ ನುಡಿದಿರುತ್ತಾರೆ. ಕರೀಗೌಡ @ ಕಾರಿಗೌಡರು ನನ್ನೊಂದಿಗೆ ವಾಸವಿದ್ದರು ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನೆಲ್ಲಾ ವಾದಿಯಿಂದ ಪುಸಲಾಯಿಸಿ ಪಡೆದು ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

12. ಕಾಮೇನಹಳ್ಳಿ ಮತ್ತು ಸಾತಿಗ್ರಾಮದ ಮಧ್ಯೆ ಕೇವಲ ಒಂದುವರೆ ಕಿ.ಲೋ. ಮೀಟರಿನ ಅಂತರ ಇದೆ ಎಂದರೆ ಸರಿಯಲ್ಲ. ಕರೀಗೌಡ @ ಕಾರಿಗೌಡರು ಯಾವುದೇ ವೀಲುನಾಮೆಯನ್ನು ಬರೆಯದಿದ್ದರು ಸಹ ನಾನು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**